ಕಾಪು ಹಾಗೂ ಉಡುಪಿ ಕ್ಷೇತ್ರದಲ್ಲಿ ಕುಡಿಯವ ನೀರಿನ ಯೋಜನೆಗಳು.

ಶ್ರೀ ವಸಂತ.ವಿ. ಸಾಲಿಯಾನ(ಕಾಪು):- ಮಾನ್ಯ ಅಧ್ಯಕ್ಷರೇ, ಕಾಪು ಕ್ಷೇತ್ರದಲ್ಲಿ 1994-95ನೇ ಇಸವಿಯಲ್ಲಿ ವಿಶ್ವ ಬ್ಯಾಂಕ್ ಅಡಿಯಲ್ಲಿ ಕುಡಿಯಲ್ಲಿ ನೀರಿನ ಯೋಜನೆ ಮೂರೂರು ಮತ್ತು ಶಿರ್ವ ಗ್ರಾಮದಲ್ಲಿ ಮೂರೂರಿಗೆ 14 ಲಕ್ಷ ಮತ್ತು ಶಿರ್ವಗ್ರಾಮಕ್ಕೆ 49 ಲಕ್ಷ ಕಾಮಗಾರಿ ಪ್ರಾರಂಭವಾಗಿತ್ತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ಇಂತಹ 11 ಯೋಜನೆಗಳು ಪ್ರಾರಂಭವಾಗಿತ್ತು. ಸುಮಾರು ಒಂದು ವರ್ಷದಿಂದ ಈ ಒಂದು ಯೋಜನೆ ಸ್ಥಗಿತಗೊಂಡಿದೆ. ಗ್ರಾಮ ಮಟ್ಟದಲ್ಲಿರುವಂತಹ ಜನರಿಗೆ ಕುಡಿಯುವ ನೀರಿನ ಸಮಸ್ಯೆ ಬಹಳಷ್ಟು ಇರುವುದರಿಂದ ಈ ಯೋಜನೆಯನ್ನು ಆದಷ್ಟು ಬೇಗ ಈ 11 ಯೋಜನೆಗಳನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಾರಂಭಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಯು. ಆರ್. ಸಭಾಪತಿ (ಉಡುಪಿ):- ಮಾನ್ಯ ಅಧ್ಯಕ್ಷರೇ ಈ ಜಾಗೃತಿಕ ಬ್ಯಾಂಕ್ ಯೋಜನೆ ಅಡಿಯಲ್ಲಿ ಎಲ್ಲೆಲ್ಲಿ ಇಂತಹ ಕಾಮಗಾರಿಗಳು ಅನುಷ್ಠಾನಕ್ಕೆ ಬಂದಿವೆ ಅಲ್ಲೆಲ್ಲಾ ಈ ಕಾಮಗಾರಿ ಕೆಲಸ ಅರ್ಧರ್ಧಕ್ಕೆ ನಿಂತುಬಿಟ್ಟಿದೆ. ಎಲ್ಲವನ್ನೂ ಒಬ್ಬರೇ ಕಂಟ್ರಾಕ್ಟ್‌ದಾರರಿಗೆ ವಹಿಸಿ ಕೊಟ್ಟು ಎಲ್ಲಾ ಕಡೆ ಸಹ ನೀರು ಸರಬರಾಜು ಯೋಜನೆಯಡಿಯಲ್ಲಿ ಓವರ್ ಹೆಡ್ ಟ್ಯಾಂಕ್‌ಗಳನ್ನು ಮಾಡುವುದು ಅರ್ಧಕ್ಕೆ ಕೆಲಸ ಬಿಟ್ಟು ಹೋದವರು ಇನ್ನೂ ಬಂದಿಲ್ಲ. ಕಾಪು ಕ್ಷೇತ್ರದ ಶಿರ್ವದಲ್ಲಿ ಹೇಗೆ ನಡೆದಿದೆಯೋ ಹಾಗೆಯೇ ನನ್ನ ಕ್ಷೇತ್ರದಲ್ಲಿ ಸಂಕೇನಡಿಯರು ಗ್ರಾಮದಲ್ಲಿ 28 ಲಕ್ಷ ರೂಪಾಯಿಗಳ ಯೋಜನೆ ಅರ್ಧಕ್ಕೆ ನಿಂತಿದೆ. ಆ ಗ್ರಾಮಕ್ಕೆ ನಾವು ನೀರು ಸರಬರಾಜು ಮಾಡುವುದಕ್ಕೆ ಆಗದೇ ಇರುವಂತಹ ಪರಿಸ್ಥಿತಿ ಬಂದಿದೆ. ನಾವು ಈಗ ಬೇರೆ ಯೋಜನೆಯನ್ನು ಕೈಗೆತ್ತಿಕೊಳ್ಳುವಂತೆಯೂ ಇಲ್ಲ, ಈ ಯೋಜನೆ ಪೂರ್ತಿಗೊಳಿಸುವಂತೆಯೂ ಇಲ್ಲ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ):- ಮಾನ್ಯ ಅಧ್ಯಕ್ಷರೇ ವಿಶ್ವಬ್ಯಾಂಕ್ ಸ್ಕೀಮ್‌ನಲ್ಲಿ ತೆಗೆದುಕೊಂಡಂತಹ ಎಲ್ಲಾ ಯೋಜನೆಗಳು ಈ ರೀತಿ ಆಗಿವೆ.

ಶ್ರೀ ಎಂ.ಸಿ. ನಾಣಯ್ಯ(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೇ, ಈ ವಿಶ್ವಬ್ಯಾಂಕಿನ ಅಡಿಯಲ್ಲಿ ತೆಗೆದುಕೊಂಡಿರತಕ್ಕಂಥ ಯೋಜನೆಗಳು ಅವು ಈಗ ಸ್ಥಗಿತಗೊಂಡಿದೆ ಎನ್ನುವಂತಹ ವಿಚಾರವನ್ನು ಹೇಳುತ್ತಿದ್ದಾರೆ. ನಾವು ಈಗ ಜಿಲ್ಲಾ ಪಂಚಾಯತಿ ಮತ್ತು ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ಅವರ ಜೊತೆಯಲ್ಲಿ ಚರ್ಚೆ ಮಾಡಿ ಸ್ಥಗಿತಗೊಂಡಿರುವುದಕ್ಕೆ ಕಾರಣಗಳು ಏನು ಕಂಟ್ರಾಕ್ಟ್‌ದಾರರು ಇದಕ್ಕೆ ಎನಾದರೂ ಜವಾಬ್ದಾರರೇ ಹಣಕಾಸು ಒದಗಿಸಿದ್ದರು ಕೂಡ ಏಕೆ ಈ ಕೆಲಸ ಆಗಿಲ್ಲ ಎನ್ನುವುದು ಬಗ್ಗೆ ಮಂಗಳೂರು ಮುಖ್ಯ ಕಾರ್ಯನಿರ್ವಾಹಕರು ಮತ್ತು ಪಿ. ಎಚ್.ಇ. ಇಲಾಖಾ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಕೆಲಸ ಮುಂದುವರಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶಿರಸಿ ನಗರ ಸಭೆಯ ಆಯುಕ್ತರನ್ನು ಸಸ್ಪೆಂಡ್ ಮಾಡುವ ಬಗ್ಗೆ

ಶ್ರೀ ಕೆ. ವಿಶ್ವೇಶ್ವರ ಹೆಗಡೆ (ಅಂಕೋಲಾ):- ಮಾನ್ಯ ಅಧ್ಯಕ್ಷರೇ ಸರ್ಕಾರದ, ಸರ್ಕಾರದ ನಿಧಾನ ಗತಿಗೆ ಇದು ಒಂದು ತಾತ್ವಿಕ ಉದಾಹರಣೆ ಇದೆ. ಸರ್ಕಾರ ಇದೆಯೋ ಇಲ್ಲವೋ ಎನ್ನುವುದಕ್ಕೆ ತಕ್ಷಣದ ಒಂದು ಉದಾಹರಣೆ ಇದೆ. ಫೆಬ್ರವರಿ 10ನೇ ತಾರೀಖು ಶಿರಸಿ ನಗರಸಭೆಯ ಆಯುಕ್ತರು ಲಂಚ ಸ್ವೀಕರಿಸುವಂತಹ ಸಂದರ್ಭದಲ್ಲಿ ಅಲ್ಲಿನ ಲೋಕಾಯುಕ್ತ ಅಧಿಕಾರಿಗಳ ಕೈಗೆ ಸಿಕ್ಕಿ ಹಾಕಿಕೊಂಡರು. ಆದರೆ ಇವತ್ತಿನವರೆಗೂ ಆ ಆಯುಕ್ತರ ಮೇಲೆ